13. ರಾಜ್ಯದಲ್ಲಿ ಎರಡೂವರೆ ಲಕ್ಷ ನಿವೃತ್ತರಿದ್ದರೂ ರಾಜಧಾನಿಯಲ್ಲಿ ನಮ್ಮದೇ ಆದ ಒಂದು ಕಛೇರಿಯಾಗಲೀ ಅಥವಾ ಜಿಲ್ಲಾ ಮತ್ತು ತಾಲ್ಲೂಕುಗಳಿಂದ ಬರತಕ್ಕ ನಿವೃತ್ತರಿಗೆ ತಂಗಲು ಅನುಕೂಲವಾಗುವಂತೆ ಕಟ್ಟಡ ಕಟ್ಟಲು ಒಂದು ನಿವೇಶನವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

14. ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ನಿವೃತ್ತದಾರರ ಸಂಘಗಳಿಗೆ ಒಂದು ನಿವೇಶನವನ್ನು ಮಂಜೂರು ಮಾಡುವುದು.

15. ಪಿಂಚಣಿದಾರರ ಮತ ಕ್ಷೇತ್ರಗಳನ್ನು ನಿರ್ಮಿಸಿ ಗ್ರಾಮ ಪಂಚಾಯಿತಿಯಿಂದ ರಾಜ್ಯಸಭೆವರೆಗೆ ಪಿಂಚಣಿದಾರರಿಗೆ ಪ್ರಾತಿನಿಧ್ಯ ಒದಗಿಸಿ ಆಯಾಯ ಸಭೆಗಳಲ್ಲಿ ಸ್ಥಾನಗಳನ್ನು ಕಾದಿರಿಸುವುದು ಇಲ್ಲವೇ ನಾಮಕರಣ ಮಾಡುವಂತಾಗಬೇಕೆಂದು ಕೋರಿರುತ್ತಾರೆ.

ಗುಬ್ಬಿ ಕ್ಷೇತ್ರದ ಶಾಸಕರ ಅನುದಾನದಿಂದ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾದ ರಸ್ತೆ ಕಾಮಗಾರಿ

2349 - ಶ್ರೀ ಬಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಬ್ಬಿ ಕ್ಷೇತ್ರದ ಶಾಸಕರ ಅನುದಾನದಿಂದ ಯಾವ ಯಾವ ರಸ್ತೆ ಕಾಮಗಾರಿಗಳು ಮಂಜೂರಾಗಿವೆ? ಒಟ್ಟು ಮೊತ್ತ ಹಾಗೂ ಪೂರ್ಣಗೊಂಡ ರಸ್ತೆಯ ದೂರ ಎಷ್ಟು ಇರುವುದು?

ಆ) ಪ್ರಾರಂಭವಾಗದೇ ಇರುವ ರಸ್ತೆಗಳು ಯಾವುವು?

ಇ) ಪ್ರಾರಂಭವಾಗದೇ ಇರಲು ಕಾರಣಗಳೇನು?

ಈ) ನಬಾರ್ಡ್‌ನಿಂದ ಯಾವ ಯಾವ ರಸ್ತೆಗೆ ಎಷ್ಟೆಷ್ಟು ಹಣ ಮಂಜೂರಾಗಿರುತ್ತದೆ?

ಉ) ನಬಾರ್ಡ್‌ನಿಂದ ಮಂಜೂರಾಗಿರುವ ರಸ್ತೆಗಳ ಕೆಲಸ ಪ್ರಾರಂಭಿಸಲಾಗಿದೆಯೇ? ಪ್ರಾರಂಭಿಸದೇ ಇದ್ದಲ್ಲಿ ಕಾರಣಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗುಬ್ಬಿ ಕ್ಷೇತ್ರದ ಶಾಸಕರ ಅನುದಾನದಲ್ಲಿ ಒಟ್ಟು 27.00 ಲಕ್ಷ ರೂ.ಗಳ ಮೊತ್ತದಲ್ಲಿ 8 ಕಾಮಗಾರಿಗಳು ಮಂಜೂರಾಗಿರುತ್ತದೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಇದರಲ್ಲಿ ಪೂರ್ಣಗೊಂಡಿರುವ ರಸ್ತೆಯ ಒಟ್ಟು ಉದ್ದ 4.95 ಕಿ.ಮಿ.ಗಳಾಗಿರುತ್ತದೆ.

ಆ) ಪ್ರಾರಂಭವಾಗದೇ ಇರುವ ಎರಡು ರಸ್ತೆ ಕಾಮಗಾರಿಗಳು

1) ಗಿರೇನ ಹಳ್ಳಿಯಿಂದ ಬಾಡೇನ ಹಳ್ಳಿಗೆ ಹೋಗುವ ರಸ್ತೆ ಕಿ.ಮೀ. 0.0 ಇಂದ 2.50 ರವರೆಗೆ ಆಯ್ದಭಾಗಗಳಲ್ಲಿ ಡಾಂಬರು ಮಾಡುವುದು.

2) ತುಮಕೂರು ಹೊನ್ನಾವರ ರಸ್ತೆಯಿಂದ ಬಂಡಿಹಳ್ಳಿಗೆ ಹೋಗುವ ರಸ್ತೆಯಲ್ಲಿ ಬಂಡಿಹಳ್ಳಿ ಗ್ರಾಮದ ಪರಿಮಿತಿಯಲ್ಲಿ ಆಯ್ದ ಆಯ್ದ ಭಾಗಗಳಲ್ಲಿ ಡಾಂಬರು ಮಾಡುವುದು.

ಇ) ಮೇಲೆ ತಿಳಿಸಿದಂತೆ ಇರುವ ಕ್ರಮ ಸಂಖ್ಯೆ (1)ರ ಕಾಮಗಾರಿಯನ್ನು ಟೆಂಡರ್ ಮೇರೆಗೆ ಕೆಲಸವನ್ನು ವಹಿಸಲಾಗಿದ್ದು ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ ಮತ್ತು ಕ್ರಮ ಸಂಖ್ಯೆ (2)ರ ಕಾಮಗಾರಿಯನ್ನು ಕೈಗೊಳ್ಳಲು ಗುತ್ತಿಗೆದಾರರು ಯಾರೂ ಮುಂದೆ ಬಾರದಿರುವುದೇ ಈ ಕೆಲಸಗಳು ಪ್ರಾರಂಭವಾಗದಿರಲು ಕಾರಣ.

ಈ) ನಬಾರ್ಡ್‌ನ ಆರ್.ಐ.ಡಿ.ಎಫ್ II ಯೋಜನೆಯಡಿ ನಲ್ಲಿಗೆರೆ ಶಿರಾ ರಸ್ತೆಯ ಗುಬ್ಬಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಭಾಗದ ರಸ್ತೆ ಅಭಿವೃದ್ಧಿಗಾಗಿ 12.50 ಲಕ್ಷ ರೂ.ಗಳು ಮಂಜೂರಾಗಿದೆ.

ಉ) ಇಲ್ಲ. ಆರ್.ಐ.ಡಿ.ಎಫ್IIರ ಅಡಿಯಲ್ಲಿ ಮಂಜೂರು ಗೊಂಡಿರುವ ನೆಲ್ಲಿಗೆರೆ-ಶಿರಾ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗುದ್ದು ದಿ: 14.8.97 ರಂದು ಟೆಂಡರ್ ಸ್ವೀಕರಿಸಲು ನಿಗದಿಪಡಿಸಲಾಗಿದೆ.

WIDE TABLES PG 114

2 PAGES

ಅನುಬಂಧ – 1

ಗುಬ್ಬಿ ಕ್ಷೇತ್ರದ ಶಾಸಕರ ಅನುದಾನದಲ್ಲಿನ ಮಂಜೂರಾದ ಕಾಮಗಾರಿಗಳ ವಿವರ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಷರಾ
1)	ಸಿ.ಎಸ್.ಪುರ-ಕೊಪ್ಪ ರಸ್ತೆಯ 2.00 ರಿಂದ 3.00 ಕಿ.ಮೀ. ನಲ್ಲಿ ಜಲ್ಲಿ ಮತ್ತು ಡಾಂಬರು ಮಾಡುವುದು.	2.00	1-05 ಕಿ.ಮೀ. ಡಾಂಬರು ಕೆಲಸ ಪೂರ್ಣಗೊಂಡಿದೆ.
2)	ನೆಲ್ಲಿಗೆರೆ-ಸಿರಾ ರಸ್ತೆಯ 14 ಮತ್ತು 25ನೇ ಕಿ.ಮೀ. ನಲ್ಲಿ ಪಾರ್ಶ್ವಗಳನ್ನು ಸರಿಪಡಿಸುವುದು.	6.00	1-00 ಕಿ.ಮೀ.ಡಾಂಬರು ರಸ್ತೆ ಕೆಲಸ ಪೂರ್ಣಗೊಂಡಿದೆ.
3)	ಗುಬ್ಬಿ ಅಮ್ಮನಘಟ್ಟ ತಿಪ್ಪೂರು ಹಲಸೀನಾಗೇನಹಳ್ಳಿ ಮಾರ್ಗ ಎಂ.ಎನ್.. ಕೋಟಿಗೆ ಹೋಗುವ ರಸ್ತೆ ಮರು ಜಲ್ಲಿ ಮತ್ತು ಡಾಂಬರು ಮಾಡುವುದು.	3.00	2-00 ಕಿ.ಮೀ. ಡಾಂಬರು ರಸ್ತೆ ಕೆಲಸ ಪೂರ್ಣಗೊಂಡಿದೆ.
4)	ದೊಡ್ಡಗುಣಿ ಸಂಪಿಗೆ ರಸ್ತೆ 0-00 ರಿಂದ 2-40 ಕಿ.ಮೀ. ನಲ್ಲಿ ಡಾಂಬರು ಮಾಡುವುದು (ಆಯ್ದ ಭಾಗಗಳಲ್ಲಿ)	4.00	ಜಲ್ಲಿ ಕಾಮಗಾರಿ ಮುಗಿದಿದೆ. ಡಾಂಬರು ಮಾಡಬೇಕಾಗಿದೆ.
5)	ಗಿರೇಹಳ್ಳಿ-ಬಾದೇನಹಳ್ಳಿಗೆ ಹೋಗುವ ರಸ್ತೆಯ 0-00 ರಿಂದ 2-50 ಕಿ.ಮಿ. ವರೆಗೆ ಡಾಂಬರುಮಾಡುವುದು (ಆಯ್ದ ಭಾಗಗಳಲ್ಲಿ)	5.00	ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜುಮೊತ್ತ ಲಕ್ಷ ರೂ.ಗಳಲ್ಲಿ	ಷರಾ
6)	ತುಮಕೂರು ಹೊನ್ನಾವರ ರಸ್ತೆ ಬಂಡೀಹಳ್ಳಿಗೆ ಹೋಗುವ ರಸ್ತೆಯಲ್ಲಿ ಬಂಡೀಹಳ್ಳಿ ಹೋಗುವ ರಸ್ತೆಯಲ್ಲಿ ಬಂಡೀಹಳ್ಳಿ ಗ್ರಾಮಪರಿಮಿತಿಯಲ್ಲಿ ಡಾಂಬರು ಮಾಡುವುದು.	1-00	ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.
7)	ಯಡಿಯೂರು ಕಲ್ಲೂರು ರಸ್ತೆಯ 18-60 ರಿಂದ 20-90 ಕಿ.ಮೀ. ವರೆಗೆ ಡಾಂಬರು ಮಾಡುವುದು (ಆಯ್ದ ಭಾಗಗಳಲ್ಲಿ)	4-00	ಜಲ್ಲಿ ಕಾಮಗಾರಿ ಮುಗಿದಿದೆ. ಡಾಂಬರು ಮಾಡಬೇಕಾಗಿದೆ.
8)	ಗುಬ್ಬಿ-ಸಿ.ಎಸ್.ಪುರ ರಸ್ತೆಯಿಂದ ಉಂಗ್ರಕ್ಕೆ ಹೋಗುವ ರಸ್ತೆ ಗೋಪಾಲಪುರ ಕೊಡಿಗೇಹಳ್ಳಿ ಮಾರ್ಗ 10ನೇ ಕಿ.ಮೀ. ನಲ್ಲಿ ಸೇತುವೆ ನಿರ್ಮಾಣ ಹಾಗೂ ಕೊಡಿಗೇಹಳ್ಳಿ ಪರಿಮಿತಿಯಲ್ಲಿ ಡಾಂಬರು ಕಾಮಗಾರಿ.	2-00	ಸೇತುವೆ ನಿರ್ಮಾಣ ಮುಗಿದಿದೆ. ಡಾಂಬರು ಮಾಡಬೇಕಾಗಿದೆ.